ಕರ್ನಾಟಕ ಸರಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ,

**ಆಯುಕ್ತರ ಕಛೇರಿ, ರೊದ್ದ ರಸ್ತೆ, ಧಾರವಾಡ-580 008**

ದೂರವಾಣಿ: 0836-2217066 ಫ್ಯಾಕ್ಸ್: 0836-2217067 ಈಮೇಲ್: cpidharwad@gmail.com

****************************************

ಸಂಖ್ಯೆ:ನಿ.ಆಶಾ.ಸ.ನ್ಯಾ.ಪ್ರ:2368/2011-2017-18 ದಿನಾಂಕ: 08-06-2017

ಸಭಾ ನಡಾವಳಿ

**ದಿನಾಂಕ 08-06-2017 ರಂದು ಬೆಳಗ್ಗೆ 10.00 ಗಂಟೆಗೆ ಮಾನ್ಯ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪು ದಿನಾಂಕ: 09-02-2017 ರಂತೆ ಅಧಿಕಾರಿ/ ನೌಕರರ ಸೇವಾ ಜೇಷ್ಠತಾ(ಬೋಧಕ/ಬೋಧಕೇತರ) ಪಟ್ಟಿ ಪುನರ್ ಪರಿಷ್ಕರಿಸುವ ಕುರಿತು ಸಭೆಯ ನಡವಳಿಗಳು.**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿ :-**

1. ಸಹನಿರ್ದೇಶಕರು(ಆ) 2) ಉಪನಿರ್ದೇಶಕರು (ಆ) 3) ಉಪನಿರ್ದೇಶಕರು (ಆ) ಸಾ.ಶಿ.ಇ ಧಾರವಾಢ 4) ಹಿರಿಯ ಸಹಾಯಕ ನಿರ್ದೇಶಕರು(ಆ), 5) ವಿಭಾಗದ ಎಲ್ಲ ಉಪನಿರ್ದೇಶಕರ ಕಛೇರಿಯ ಶಿಕ್ಷಣಾಧಿಕಾರಿಗಳು, 6) ಪತ್ರಾಂಕಿತ ಸಹಾಯಕರು/ ವ್ಯವಸ್ಥಪಕರು ಹಾಗೂ ಸಿಬ್ಬಂದಿವರ್ಗ

2. ಶ್ರೀ ಆರ್ ಎಸ್ ಮುಳ್ಳೂರ, ಹಿರಿಯ ಸಹಾಯಕ ನಿರ್ದೇಶಕರು ಸ್ವಾಗತವನ್ನು ಕೋರಿದರು.

3. ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ತೀರ್ಪು ದಿನಾಂಕ 09-02-2017 ರಂತೆ ಅಧಿಕಾರಿ/ನೌಕರರ ಸೇವಾ ಜೇಷ್ಟತಾ (ಬೋಧಕ/ಬೋಧಕೇತರರ) ಪಟ್ಟಿ ಪುನರ ಪರಿಷ್ಕರಿಸುವ ಸರ್ಕಾರದ ಆದೇಶ ಸಂಖ್ಯೆ ಡಿಪಿಎಆರ್ 182 ಎಸ್.ಆರ್.ಆರ್. 2011, ದಿನಾಂಕ 06-05-2017 ರಲ್ಲಿ ತಿಳಿಸಿದಂತೆ ದಿನಾಂಕ 27-04-1978 ರಿಂದ ಇಲ್ಲಿಯವರೆಗೆ ಬಡ್ತಿ ನೀಡದವರ ಪಟ್ಟಿಯನ್ನು ಪರಿಷ್ಕರಿಸಲು ಸರ್ಕಾರದ ಅದೇಶ ದಿನಾಂಕ 06-05-2017ರ ಕ್ರಮಸಂಖ್ಯೆ 16 ರ ರಲ್ಲಿರುವ 1 ರಿಂದ 11 ಅಂಶಗಳಲ್ಲಿ ಸೂಚಿಸಿರುವಂತೆ ಸಂಬಂಧಿಸಿದ ಪ್ರಾಧಿಕಾರಿಗಳು ಕ್ರಮವಹಿಸುವಂತೆ ಸೂಚಿಸಲಾಯಿತು.

4. ಸರ್ಕಾರದ ಆದೇಶ ಸಂಖ್ಯೆ ಡಿಪಿಎಆರ್ 182 ಎಸ್.ಆರ್.ಆರ್. 2011, ದಿನಾಂಕ 06-05-2017 ರಲ್ಲಿನ ಸೂಚಿಸಿದ ಅಂಶಗಳ ಕುರಿತು ಪ್ರತಿ ಅಂಶಗಳ ಬಗ್ಗೆ ಚರ್ಚಿಸಿ ಸರ್ಕಾರದ ಆದೇಶಗಳನ್ವಯ ನೇಮಕಾತಿ/ ಬಡ್ತಿ ಪ್ರಾಧಿಕಾರವು ಕಾಲಕಾಲಕ್ಕೆ ಬದಲಾವಣೆಯಾಗಿರುತ್ತವೆ.

5. ಅದರಂತೆ ಬದಲಾವಣೆಯಾದ ಪ್ರಾಧಿಕಾರವು ತಮಗೆ ಪ್ರತ್ಯಾಯೋಜಿಸಿದ ಅಧಿಕಾರದ ಅವಧಿಯಿಂದ ಸದರ ಅಂಶಗಳ ಕುರಿತು ಸರ್ಕಾರದ ಆದೇಶ ಸಂಖ್ಯೆ ಡಿಪಿಎಆರ್ 182 ಎಸ್.ಆರ್.ಆರ್. 2011, ದಿನಾಂಕ 06-05-2017 ರಲ್ಲಿನ ಅಂಶಗಳ ಬಗ್ಗೆ ವಿವರಣೆ ನೀಡಿ ಪ್ರತಿ ಜಿಲ್ಲೆಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಪ್ರತಿ ವೃಂದದಲ್ಲಿ ಸಂಬಂಧಿಸಿದ ಪ್ರಾಧಿಕಾರಿಗಳು ನೀಡಿರುವ ಬಡ್ತಿಗಳ ಹಾಗೂ ಜೇಷ್ಠತಾ ಪಟ್ಟಿಯನ್ನು ಪರಿಶೀಲಿಸಿ ಜೇಷ್ಠತೆಯ ಮೇಲೆ ಬಡ್ತಿಯನ್ನು ಪುನರ ಪರಿಷ್ಕರಿಸಿ ಪೂರ್ಣ ದಾಖಲೆಗಳೊಂದಿಗೆ ದಿನಾಂಕ 27-06-2017 ರಂದು

ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಯಿತಲ್ಲದೆ ಈ ಕೆಳಕಂಡ ಅಂಶಗಳನ್ನು ಮನವರಿಕೆ ಮಾಡಲಾಯಿತು.

6. ಈ ಪ್ರಕ್ರಿಯೆ ಪ್ರಾರಂಭ ಮಾಡುವ ಪೂರ್ವದಲ್ಲಿ ಇದಕ್ಕೆ ಸಂಬಂಧಿಸಿದ ಎಲ್ಲಾ ಸರ್ಕಾರಿ ಆದೇಶ, ಸುತ್ತೋಲೆಗಳನ್ನು ಇಟ್ಟುಕೊಂಡು ಜೇಷ್ಠತಾ ಪಟ್ಟಿಯನ್ನು ಸರ್ಕಾರದ ಆದೇಶದಲ್ಲಿ ನೀಡಿದ ನಿರ್ದೇಶನದಂತೆ ಪರಿಷ್ಕರಿಸುವುದು.
7. ಈಗಿರುವ ಜಿಲ್ಲೆಗಳಿಂದ ಬೇರ್ಪಟ್ಟ ಹಾವೇರಿ, ಗದಗ, ಶಿರಸಿ, ಬಾಗಲಕೋಟ, ಮತ್ತು ಚಿಕ್ಕೋಡಿ ಜಿಲ್ಲೆಯವರು ಮೂಲ ಜಿಲ್ಲೆಯಿಂದ ಮಾಹಿತಿ ಪಡೆದುಕೊಂಡು ಸದರ ಕಾರ್ಯವನ್ನು ನಿರ್ವಹಿಸುವುದು.
8. ದಿನಾಂಕ 27-04-1978 ರಿಂದ ವರ್ಷವಾರು ಜೇಷ್ಠತಾ ಪಟ್ಟಿಯನ್ನು ಮತ್ತು ಬಡ್ತಿ ನೀಡಿದ ಪಟ್ಟಿಯನ್ನು ತಾಳೆ ಮಾಡಿ ಜೇಷ್ಠತೆಯ ಆಧಾರದ ಮೇಲೆ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸುವುದು.
9. ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ತೀರ್ಪಿನನ್ವಯ ಸರ್ಕಾರದ ಹೊರಡಿಸಿದ ಆದೇಶದಂತೆ ನಿಗದಿತ ಅವಧಿಯಲ್ಲಿ ಕಾರ್ಯನಿರ್ವಸುವುದು ಹಾಗೂ ಯಾವುದೇ ಕಾರಣಕ್ಕೂ ಕಾನೂನುಬಾಹಿರವಾಗದಂತೆ ಕ್ರಮವಹಿಸುವುದು
10. ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ತೀರ್ಪು ದಿನಾಂಕ 09-02-2017 ರಂತೆ ಅಧಿಕಾರಿ/ ನೌಕರರ ಸೇವಾ ಜೇಷ್ಠತಾ (ಬೋಧಕ/ಬೋಧಕೇತರರ) ಪಟ್ಟಿ ಪುನರ ಪರಿಷ್ಕರಿಸುವ ಕುರಿತು ವಿಭಾಗದ ಎಲ್ಲ ಉಪನಿರ್ದೇಶಕರ ಕಛೇರಿಯ ಶಿಕ್ಷಣಾಧಿಕಾರಿಗಳು, ಪತ್ರಾಂಕಿತ ಸಹಾಯಕರು/ವ್ಯವಸ್ಥಾಪಕರು, ಅಧೀಕ್ಷಕರು ಹಾಗೂ ವಿಷಯ ನಿರ್ವಾಹಕರನ್ನೊಳಗೊಂಡ ಸಮಿತಿಯನ್ನು ಉಪನಿರ್ದೇಶಕರು (ಆಡಳಿತ) ಸಾ.ಶಿ.ಇ ಇವರು ರಚಿಸಿ ನಾಳೆಯೇ ವರದಿ ಮಾಡಲು ಸಭೆಯಲ್ಲಿ ಸೂಚಿಸಲಾಯಿತು.
11. ಪರಿಷ್ಕರಣಾ ಕಾರ್ಯ ಅನುಕೂಲವಾಗಲು ಜೇಷ್ಠತಾ ಪಟ್ಟಿ ಮತ್ತು ಬಡ್ತಿ ಪಟ್ಟಿ ಬಹು ಮುಖ್ಯವಾಗಿದ್ದು ಅವುಗಳನ್ನು ತಮ್ಮ ತಮ್ಮ ಕಛೇರಿಯ ಅಭಿಲೇಖಾಲಯದಲ್ಲಿ ಪಡೆದುಕೊಂಡು ಜರೂರಾಗಿ ಕೆಲಸ ಕೈಗೊಳ್ಳಲು ತಿಳಿಸಲಾಯಿತು.
12. ಪರಿಷ್ಕರಣಾ ಕಾರ್ಯದಲ್ಲಿ ಏನೇ ಸಮಸ್ಯೆಗಳು ಎದುರಾದಲ್ಲಿ ಆಯುಕ್ತಾಲಯದ ಶ್ರೀಮತಿ ಮಮತಾ ನಾಯಕ, ಉಪನಿರ್ದೇಶಕರು(ಆ), ಶ್ರೀ ಆರ್. ಎಸ್. ಮುಳ್ಳೂರು, ಹಿರಿಯ ಸಹಾಯಕ ನಿರ್ದೇಶಕರು, ಇವರಿಂದ ಮೇಲ್ ಅಥವಾ ಮೇಸೆಜ್ ಮೂಲಕ ಸಂಪರ್ಕಿಸಿ ಇತ್ಯರ್ಥಪಡಿಸಿಕೊಳ್ಳಲು ತಿಳಿಸಲಾಯಿತು.
13. ಈ ಬಗ್ಗೆ ಯಾವುದೇ ಕಾರಣಕ್ಕೂ ಈ ಕೆಲಸದಲ್ಲಿ ಅಸಡ್ಡೆ, ನಿರ್ಲಕ್ಷ ವಹಿಸದೆ ತುಂಬಾ ಎಚ್ಚರಿಕೆಯಿಂದ ತಂಡದಲ್ಲಿ ಕೆಲಸ ಮಾಡಲು ಸೂಚಿಸಲಾಯಿತು. ಈ ಕುರಿತು ಆಗಬಹುದಾದ ಯಾವುದೇ ವಿಳಂಬ ಮತ್ತು ತಪ್ಪುಗಳಿಗೆ ಸಂಬಂಧಿಸಿದ ಆಯಾ ಜಿಲ್ಲಾ ಉಪ ನಿರ್ದೇಶಕರೇ ಜವಾಬ್ದಾರರೆಂದು ಪರಿಗಣಿಸಲಾಗುವುದು.
14. ಬೋಧಕೇತರ ನೌಕರರಾದ ದ್ವಿತೀಯ ದರ್ಜೆ ಸಹಾಯಕರು ಹಾಗೂ ಸಮನಾಂತರ ಹುದ್ದೆಗಳು, ಪ್ರಥಮ ದರ್ಜೆ ಸಹಾಯಕರು, ಶೀಘ್ರಲಿಪಿಗಾರರು, ಅಧೀಕ್ಷಕರು, ಪತ್ರಾಂಕಿತ ವ್ಯವಸ್ಥಾಪಕರು, ಪತ್ರಾಂಕಿತ ಸಹಾಯಕರ ಜೇಷ್ಠತಾ ಪಟ್ಟಿಯನ್ನು ಪ್ರಸ್ತುತ ದಿನಾಂಕದವರೆಗೆ ಈ ಪತ್ರಕ್ಕೆ ಲಗತ್ತಿಸಿದ ನಿಗದಿತ ನಮೂನೆಯಲ್ಲಿ (ನುಡಿ ಅಕ್ಷರ Excelsheet ನಲ್ಲಿ) ದಿ.17-06-2017 ರಂದು ನಡೆಯುವ ಪತ್ರಾಂಕಿತ ಸಹಾಯಕರು/ ವ್ಯವಸ್ಥಾಪಕರು, ಸಭೆಗೆ ಕಡ್ಡಾಯವಾಗಿ ಹಾರ್ಡ ಪ್ರತಿ & ಸಾಪ್ಟ ಪ್ರತಿಯನ್ನು ತರಲು ಸೂಚಿಸಲಾಯಿತು.
15. ಸದರ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಹಂತದಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಪರಿಶೀಲಿಸುವ ಸಂಬಂಧ ಪತ್ರಾಂಕಿತ ಸಹಾಯಕರು/ವ್ಯವಸ್ಥಾಪಕರು ಸಭೆಯನ್ನು ದಿನಾಂಕ 17-06-2017 ಶನಿವಾರದಂದು ಮುಂಜಾನೆ 11-00 ಗಂಟೆಗೆ ಈ ಕಛೇರಿಯಲ್ಲಿ ನಡೆಸಲು ತೀರ್ಮಾನಿಸಲಾಯಿತು.

16. ಬೋಧಕ ಹಾಗೂ ಬೋಧಕೇತರ ನೌಕರರ ಬಡ್ತಿ ನೀಡುವ ಪ್ರಾಧಿಕಾರಿಗಳ ವಿವರ

| ಅ.ನಂ | ಬಡ್ತಿ ನೀಡಿದ ಹುದ್ದೆ | ಅವಧಿ | ಸಂಬಂಧಿಸಿದ ಪ್ರಾಧಿಕಾರ |
|---|---|---|---|
| 1 | ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ಹುದ್ದೆಗೆ | 27-04-1978 ರಿಂದ ಇಲ್ಲಿಯವರೆಗೆ | ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, |
| 2 | ಪದವಿಧರೇತರ ಮುಖ್ಯ ಶಿಕ್ಷಕರು | 27-04-1978 ರಿಂದ ಇಲ್ಲಿಯವರೆಗೆ | ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, |
| 3 | ಸರ್ಕಾರಿ ಪ್ರೌಢ ಶಾಲಾ ಸ.ಶಿ ಗ್ರೇಡ-2 ಹುದ್ದೆಗೆ | 24-06-2003 ರಿಂದ ಇಲ್ಲಿಯವರೆಗೆ | ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, |
| 4 | ಸರ್ಕಾರಿ ಪ್ರೌಢ ಶಾಲಾ ದೈ.ಶಿ ಗ್ರೇಡ-1 ಹುದ್ದೆಗೆ | 24-06-2003 ರಿಂದ ಇಲ್ಲಿಯವರೆಗೆ | ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, |
| 5 | ದ್ವಿತೀಯ ದರ್ಜೆ ಸಹಾಯಕರ ಹುದ್ದಗೆ | 27-04-1978 ರಿಂದ ಇಲ್ಲಿಯವರೆಗೆ | ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, |
| 6 | ಅಟೆಂಡರ ಹುದ್ದೆಗೆ | 27-04-1978 ರಿಂದ ಇಲ್ಲಿಯವರೆಗೆ | ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, |
| 7 | ಸರ್ಕಾರಿ ಪ್ರೌಢ ಶಾಲಾ ಸ.ಶಿ ಗ್ರೇಡ-2 ಹುದ್ದೆಗೆ | 27-04-1978 ರಿಂದ 24-06-2003 | ಸಹ ನಿರ್ದೇಶಕರು, ಸಾ.ಶಿ.ಇ ಬೆಳಗಾವಿ |
| 8 | ಸರ್ಕಾರಿ ಪ್ರೌಢ ಶಾಲಾ ದೈ.ಶಿ ಗ್ರೇಡ-1 ಹುದ್ದೆಗೆ | 27-04-1978 ರಿಂದ 24-06-2003 | ಸಹ ನಿರ್ದೇಶಕರು, ಸಾ.ಶಿ.ಇ ಬೆಳಗಾವಿ |

ವಂದನೆಗಳನ್ನು ತಿಳಿಸಿ ಸಭೆ ಮುಕ್ತಾಯಗೊಳಿಸಿದರು.

9/6

(ಎಸ್. ಜಯಕುಮಾರ)
ನಿರ್ದೇಶಕರು
(ಪ್ರಾಥಮಿಕ&ಪ್ರೌಢ ಶಿಕ್ಷಣ)

ಪ್ರತಿ ಮಾಹಿತಿ ಮತ್ತು ಮುಂದಿನ ಅಗತ್ಯ ಕ್ರಮಕ್ಕಾಗಿ

1. ಕಾರ್ಯದರ್ಶಿಗಳು ಕ.ಪ್ರೌ.ಶಿ.ಪ.ಮ ಮತ್ತು ಪದನಿಮಿತ್ತ ಸಹನಿರ್ದೇಶಕರು ಬೆಳಗಾವಿ ವಿಭಾಗ, ಬೆಳಗಾವಿ
2. ವಿಭಾಗದ ಎಲ್ಲ ಉಪನಿರ್ದೇಶಕರು (ಆ) ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಹಾವೇರಿ, ಶಿರಸಿ, ಕಾರವರ, ಗದಗ, ಬಾಗಲಕೋಟೆ, ವಿಜಯಪುರ, ಚಿಕ್ಕೋಡಿ, ಬೆಳಗಾವಿ
3. ಈ ಕಛೇರಿಯ ಆಡಳಿತ ವಿಭಾಗದ -ಸಿ2 ವಿಭಾಗಕ್ಕೆ

ಪ್ರತಿ ಮಾಹಿತಿಗಾಗಿ:-

1. ಅಪರ ಆಯುಕ್ತರ ಆಪ್ತ ಶಾಖೆ.
2. ಸಹನಿರ್ದೇಶಕರ ಆಪ್ತ ಶಾಖೆ,

## ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ

### ಬೋಧಕೇತರ ನೌಕರರ ಜೇಷ್ಟತಾ ಪಟ್ಟಿ

| ಕ್ರ.ಸಂ | ನೌಕರರ ಹೆಸರು | ಕಾರ್ಯ ನಿರ್ವಹಿಸುತ್ತಿರುವ ಕಚೇರಿ/ ಶಾಲೆಯ ಪೂರ್ಣ ವಿಳಾಸ | ನೇಮಕಾತಿ ಹೊಂದಿದ ಹುದ್ದೆ | ನೇಮಕಾತಿ ವಿಧಾನ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಪ್ರಸ್ತುತ ಹುದ್ದೆಗೆ ಬಡ್ತಿ ಹೊಂದಿದ ಆದೇಶ ದಿನಾಂಕ | ಪ್ರಸ್ತುತ ಹುದ್ದೆಯಲ್ಲಿ ಹಾಜರಾದ ದಿನಾಂಕ | ಒಂದಕಿಂತ ಹೆಚ್ಚಿನ ಹುದ್ದೆಗಳಿಗೆ ಮೀಸಲಾತಿಯಲ್ಲಿ ಬಡ್ತಿ ಹೊಂದಿದ್ದಲ್ಲಿ ಹುದ್ದೆ & ದಿನಾಂಕ | ಜಾತಿ (ಸಾಮಾನ್ಯ, ಪ.ಜಾ. ಪ.ಪಂ | ಷರಾ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |